**ಮಿಸ್ ಕೇಸ್ ನಂಬ್ರ: 5/2023   ಪಿ.ಡಬ್ಲ್ಯೂ ಃ 1**

ದಿನಾಂಕಃ 09-08-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲುಃ ಶ್ರೀ ಯು.ಡಿ.ಎಸ್. ವಕೀಲರಿಂದ**

ನಾನು ಸುಮಾರು ವರ್ಷದಿಂದ ಮರವಂತೆಯಲ್ಲಿ ವಾಸವಿದ್ದೇನೆ. ನನ್ನ ತಾಯಿಗೆ ನನ್ನನ್ನು ಸೇರಿ ಒಟ್ಟು ಮೂರು ಜನ ಮಕ್ಕಳು.

2. ಓ.ಎಸ್.ನಂಬ್ರ.283/2018 ದಾವೆಯನ್ನು ದಾಖಲಿಸುವಾಗ ನನ್ನ ತಾಯಿಗೆ 65 ವರ್ಷ ವಯಸ್ಸು. ಸದರಿ ದಾವೆಯಲ್ಲಿ ಪ್ರತಿವಾದಿಯರು ವಕೀಲರ ಮೂಲಕ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ದಾವೆ ದಾಖಲಿಸಿದ ನಂತರ ದಾವೆಯ ಬಗ್ಗೆ ಮಾಹಿತಿಯನ್ನು ನನ್ನ ವಕೀಲರಿಂದ ಪಡೆದುಕೊಂಡಿದ್ದೇನೆ. ಸದರಿ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನನ್ನ ವಕೀಲರು ನನ್ನಲ್ಲಿ ಹೇಳಿರುವುದಿಲ್ಲ. ನಾನು ನನ್ನ ವಕೀಲರಲ್ಲಿ ಸದರಿ ದಾವೆಯ ಬಗ್ಗೆ ವಿಚಾರಿಸಿರುವುದಿಲ್ಲ. ಸದರಿ ದಾವೆಗೆ ಸಂಬಂಧಪಟ್ಟ ದಾಖಲೆಗಳನ್ನು ನನ್ನ ವಕೀಲರಿಗೆ ನೀಡಿದ್ದೇನೆ. ಸದರಿ ದಾವೆಯನ್ನು ದಾಖಲಿಸಿದ ನಂತರ ಹಾಗು ಕರೋನ ಪ್ರಾರಂಭವಾದ ನಂತರ ನನ್ನ ತಾಯಿಗೆ ಅನಾರೋಗ್ಯ ಪ್ರಾರಂಭವಾಗಿದೆ. ಸದರಿ ದಾವೆ ಇತ್ಯರ್ಥದಲ್ಲಿರುವ ಬಗ್ಗೆ ನನ್ನ ತಾಯಿಗೆ ಅನಾರೋಗ್ಯವಿದ್ದು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಎಂದು ನನ್ನ ವಕೀಲರಿಗೆ ಹೇಳಿದ್ದೇನೆ. ನನ್ನ ತಾಯಿಗೆ ಬಿ.ಪಿ., ಶುಗರ್ ಇದೆ. ಆ ಬಗ್ಗೆ ಚಿಕಿತ್ಸೆಯನ್ನು ಕುಂದಾಪುರ ಆಸ್ಪತ್ರೆಯಲ್ಲಿ ಕೊಡಿಸಿದ್ದೇನೆ. ಅವರು ಕುಂದಾಪುರ ಮತ್ತು ಉಡುಪಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗುತ್ತಿದ್ದರು. ನನ್ನ ತಾಯಿಯ ಅನಾರೋಗ್ಯಕ್ಕೆ ಸಂಬಂಧಿಸಿದ ವೈದ್ಯಕೀಯ ಬಿಲ್ಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನನ್ನ ತಾಯಿಗೆ ಅನಾರೋಗ್ಯವಿದ್ದಾಗ ನ್ಯಾಯಾಲಯಕ್ಕೆ ಬರಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಕರೆದರೆ ಬರುತ್ತಿದ್ದೆ ಎಂದು ನುಡಿಯುತ್ತಾರೆ.

3. ದಿಃ 23-01-2019 ರಂದು ವಾದಿಯ ಸಾಕ್ಷಿ ವಿಚಾರಣೆಗೆ ದಿನಾಂಕ ನಿಗದಿಯಾಗಿತ್ತು ಎಂದರೆ ಗೊತ್ತಿಲ್ಲ. ದಿಃ 28-03-2020 ರಂದು ಪ್ರಥಮ ಲಾಕ್ ಡೌನ್ ಘೋಷಣೆಯಾಗಿದೆ ಎಂದರೆ ಸರಿ. 2018 ರಿಂದ 2020 ನೇ ಇಸವಿಯ ಮಧ್ಯದ ಅವಧಿಯಲ್ಲಿ ನ್ಯಾಯಾಲಯಕ್ಕೆ ಹಾಜರಾಗಲು ತೊಂದರೆ ಇರಲಿಲ್ಲ. ದಾವೆ ಸಲ್ಲಿಸಿದ ನಂತರ ವಕೀಲರ ಕಚೇರಿಗೆ ಹೋಗಿ ಭೇಟಿ ನೀಡಿರುವುದಿಲ್ಲ, ಸಾಕ್ಷಿಯು ಮುಂದುವರಿದು ಫೋನಿನ ಮುಖಾಂತರ ವಿಚಾರಿಸಿರುತ್ತೇನೆ ಎಂದು ನುಡಿಯುತ್ತಾರೆ.

4. ನನ್ನ ತಾಯಿಗೆ ಅಲ್ಪಸ್ವಲ್ಪ ಓದಲು ಬರೆಯಲು ಬರುತ್ತದೆ. ಬೈಂದೂರು ನ್ಯಾಯಾಲಯಕ್ಕೆ ದಾವೆ ವರ್ಗಾವಣೆಯಾದ ನಂತರ ನನಗೆ ನೋಟೀಸು ಬಂದಿದೆ. ನನ್ನ ವಕೀಲರು ಅವರೇ ನೋಡಿಕೊಳ್ಳುತ್ತಾರೆ,

ನೀವು ಬರುವುದು ಬೇಡಾ ಎಂದು ಹೇಳಿರುತ್ತಾರೆ. ದಿಃ 22-07-2022 ರಂದು ಹಾಜರಾಗಬೇಕೆಂದು ನ್ಯಾಯಾಲಯದಿಂದ ನೋಟೀಸು ಬಂದಿದೆ.

5. ದಾವೆ ವಜಾ ಆದ ನಂತರ ಆದೇಶದ ಪ್ರತಿಯನ್ನು ಶ್ರೀ ಎ.ಬಿ.ಎಸ್. ವಕೀಲರ ಮುಖಾಂತರ ಪಡೆದುಕೊಂಡಿದ್ದೇನೆ. ದಾವೆ ವಜಾ ಆದ ನಂತರ ದಿಃ 29-08-2022 ರಂದು ನನ್ನ ವಕೀಲರ ಮೂಲಕ ಅರ್ಜಿಯನ್ನು ನನ್ನ ತಾಯಿಯ ಹೆಸರಿನಲ್ಲಿ ಸಲ್ಲಿಸಿದ್ದೇನೆ. ವಕೀಲರನ್ನು ನಾನೇ ಭೇಟಿಯಾಗಿರುತ್ತೇನೆ. ನನ್ನ ತಾಯಿ ಕುಂದಾಪುರದಲ್ಲಿರುವ ವಕೀಲರ ಕಚೇರಿಗೆ ಹೋಗಿ ಸಹಿ ಮಾಡಿರುತ್ತಾರೆ. ದಿಃ 29-02-2024 ರಂದು ನನ್ನ ತಾಯಿ ನನಗೆ ಜಿ.ಪಿ.ಎ.ನ್ನು ನೀಡಿರುತ್ತಾರೆ. ಸದರಿ ಜಿ.ಪಿ.ಎ.ನ್ನು ಭಾಸ್ಕರ ಶೆಟ್ಟಿ ವಕೀಲರ ಮೂಲಕ ತಯಾರಿಸಲಾಗಿದೆ. ಅವರ ಕಚೇರಿಗೆ ನಾನು ಮತ್ತು ನನ್ನ ತಾಯಿ ಹೋಗಿದ್ದೇವೆ. ಅರ್ಜಿ ಸಲ್ಲಿಸಿದ ನಂತರ ನನ್ನ ತಾಯಿ ವಕೀಲರನ್ನು ಭೇಟಿಯಾಗಿರುವುದಿಲ್ಲ.

6. ನನ್ನ ತಾಯಿ ಆರೋಗ್ಯವಂತರಾಗಿದ್ದು ಅವರ ನಿರ್ಲಕ್ಷ್ಯತನದಿಂದ ದಾವೆ ವಜಾ ಆಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಪ್ರತಿವಾದಿಗಳ ಮೇಲೆ ಒತ್ತಡ ಹೇರಿ ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿ ಆರೋಗ್ಯವಂತರಾಗಿರುವ ಕಾರಣ ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದ ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಲಿಖಿತ ಪತ್ರವನ್ನು ಸಲ್ಲಿಸಿದ ನಂತರ ದಾವೆಯನ್ನು ಗೆಲ್ಲುವ ಸಾಧ್ಯತೆ ಕಡಿಮೆ ಇರುವ ಕಾರಣ ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನ್ಯಾಯಾಲಯಲದಲ್ಲಿ ಸತ್ಯ ವಿಚಾರ ಗೊತ್ತಾಗುತ್ತದೆ ಎಂದು ನಾನು ಅವರಿಂದ ಜಿ ಪಿ ಎ ಪಡೆದುಕೊಂಡು ಹಾಜರಾಗಿದ್ದೇನೆ ಎಂದರೆ ಸರಿಯಲ್ಲ.

7. ನನ್ನ ತಾಯಿ ಹತ್ತಿರದ ಸಂಬಂಧಿಗಳ ಸಭೆ-ಸಮಾರಂಭ ಇದ್ದರೆ ಹೋಗುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೋರಿರುವ ನಿವೃತ್ತಿಯನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**